**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು**
**ಸಿ.ಸಿ. ನಂ: 693/2023**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | **ಕೆ.ಏರಿಸ್ವಾಮಿ** | **ಪಿ.ಡಬ್ಲ್ಯೂ-02** |
| **ತಂದೆಯ ಹೆಸರು** | : | **ಸುಬ್ಬಪ್ಪಾ** | **ಸಿ.ಡಬ್ಲ್ಯೂ-02** |
| **ವಯಸ್ಸು** | : | **46 ವರ್ಷ** | |
| **ಉದ್ಯೋಗ** | : | **ವ್ಯವಸಾಯ** | **ಸಾಕ್ಷಿಗೆ ಪ್ರಮಾಣ ವಚನ ಭೋದಿಸಿದ ದಿನಾಂಕಃ 24.08.2026.** |
| **ವಾಸಸ್ಥಳ** | : | **ಭುಂಜಗನಗರ ಗ್ರಾಮ** | |

**ಸಾಕ್ಷಿಯ ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ದಿಃ03.05.2023 ರಂದು ಭುಂಜಗನಗರ ಗ್ರಾಮದಲ್ಲಿ ಇರುವ ಹುಡಗಿಯ ಮನೆಯ ಹತ್ತಿರ ಪೊಲೀಸ್‌ರು ಗಂಡ ಹೆಂಡತಿಯ ಜಗಳದ ವಿಚಾರವಾಗಿ ಪಂಚನಾಮೆ ಮಾಡಿ ನನ್ನ ಸಹಿಯನ್ನು ಪಡೆದಿರುತ್ತಾರೆ. ಆ ಸಮಯದಲ್ಲಿ ಚಾಸಾ3 ಮತ್ತು ಪೊಲೀಸ್‌ರು ಇದ್ದರು. ಸದರಿ ಪಂಚನಾಮೆಯನ್ನು ಸಂಜೆ 4.00 ರಿಂದ 5.00 ರವರೆಗೆ ಮಾಡಿರುತ್ತಾರೆ. ಆ ಸಮಯದಲ್ಲಿ ಒಂದು ನಾಕಶೆಯನ್ನು ತಯಾರಿಸಿ ಪೋಟೊವನ್ನು ತೆಗೆದಿರುತ್ತಾರೆ. ಸಾಕ್ಷಿ ನಿಪಿ-2 ಮತ್ತು 3 ರಲ್ಲಿ ಇರುವ ತನ್ನ ಸಹಿ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-2(ಬಿ) ಮತ್ತು ನಿಪಿ-3(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-4 ರಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಪಿ.ಬಿ.ಎಸ್ ವಕೀಲರಿಂದ.**

ಪಂಚನಾಮೆಯಲ್ಲಿ ಬರೆದ ಸಂಪೂರ್ಣ ಮಾಹಿತಿ ನನಗೆ ಇರುವುದಿಲ್ಲ. ಗಂಡ ಹೆಂಡತಿಯ ವಿಚಾರವಾಗಿ ಮಾತ್ರ ಪೊಲೀಸ್‌ರು ನನ್ನನ್ನು ಕರೆದಿರುತ್ತಾರೆ ಎಂದರೆ ಸರಿ. ನಾನು ಆಗಾಗ ಪೊಲೀಸ್‌ರು ಠಾಣೆಗೆ ಕರೆಸಿದಾಗ ಪಂಚನಾಮೆಗೆ ಹೋಗುತ್ತೇನೆ ಎಂದರೆ ಸರಿಯಲ್ಲ. 2015 ರಲ್ಲಿ ನನ್ನ ಹೆಂಡತಿ ಗ್ರಾಮ ಪಂಚಾಯತ ಸದಸ್ಯರಾಗಿದ್ದರು ಎಂದರೆ ಸರಿ. ನಾನು ಊರಿನ ಮುಖಂಡರು ಎಂದು ಪೊಲೀಸ್‌ರು ಆಗಾಗ ನನಗೆ ಠಾಣೆಗೆ

ಕರೆಸಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ1 ರವರು ನನಗೆ ಪರಿಚಯ ಎಂದರೆ ಸರಿ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಠಾಣೆಯಲ್ಲಿ ಪಂಚನಾಮೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಆರೋಪಿತರ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೆ.ಸರಿ.ಇದೆ.**

**ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ಸಂಡೂರು.**